**ಸಾಕ್ಷಿಯನ್ನು ದಿನಾಂಕಃ 28.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ವಾದಿಗಳ ಪರ ಶ್ರೀ ಸಿ.ಎಲ್.ಬಿ, ವಕೀಲರಿಂದಃ**

ನನ್ನ ತಾತ ಮಲಿಯನಾಯಕರವರು ಸಲ್ಲಿಸಿದ್ದ ಮೂಲದಾವೆ ಸಂಖ್ಯೆ 436/1990 ಮತ್ತು ಎಫ್.ಡಿ.ಪಿ 6/2008 ರ ಪ್ರಕರಣಗಳ ಸಂಪೂರ್ಣ ವಿಚಾರ ನನಗೆ ಗೊತ್ತಿರುತ್ತದೆ. 1 ನೇ ವಾದಿ, 2 ನೇ ವಾದಿಯ ಗಂಡ ಮತ್ತು 3 ನೇ ವಾದಿ ತಂದೆ ಗಂಗಾಧರ ನಾಯಕ ಹಾಗು 1 ನೇ ಪ್ರತಿವಾದಿ ಮಲಿಯನಾಯಕರವರ ಮಕ್ಕಳಾಗಿರುತ್ತಾರೆ ಎಂದರೆ ಸರಿ, ಆದರೆ ಅವರಿಗೆ ಚಿಕ್ಕಮ್ಮ ಎಂಬ ಹೆಣ್ಣುಮಗಳು ಕೂಡ ಇರುತ್ತಾರೆ. ನನ್ನ ತಾತ ಬದುಕಿರುವಾಗಲೇ ಮೂಲದಾವೆ ಸಂಖ್ಯೆ 436/1990 ರ ಪ್ರಕರಣ ಡಿಕ್ರಿಯಾಗಿರುತ್ತದೆ. ಸದರಿ ಡಿಕ್ರಿಯಂತೆ ದಾವಾ ಸ್ವತ್ತುಗಳು ನನ್ನ ತಾತನ ಭಾಗಕ್ಕೆ ಬಂದಿರುತ್ತವೆ ಎಂದರೆ ಸರಿ. ನನ್ನ ತಂದೆ, 1 ನೇ ವಾದಿ, 2 ನೇ ವಾದಿಯ ಗಂಡ ಮತ್ತು 3 ನೇ ವಾದಿಯ ತಂದೆ ಗಂಗಾಧರನಾಯಕ, ನನ್ನ ಅಜ್ಜಿ ಮತ್ತು ನನ್ನ ಅತ್ತೆ ಚಿಕ್ಕಮ್ಮ ಎಫ್.ಡಿ.ಪಿ 6/2008 ರಂತೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಅರ್ಜಿ ಚಾಲ್ತಿಯಲ್ಲಿರುವಾಗ ನನ್ನ ಅಜ್ಜಿ ಮೃತಪಟ್ಟಿರಲಿಲ್ಲ, ಅವರು 2016 ರಲ್ಲಿ ಮೃತಪಟ್ಟಿರುತ್ತಾರೆ. ಸದರಿ ಅರ್ಜಿ ಚಾಲ್ತಿಯಲ್ಲಿರುವಾಗ ಗಂಗಾಧರ ನಾಯ್ಕು ಮೃತಪಟ್ಟಿದ್ದರಿಂದ 2 ಮತ್ತು 3 ನೇ ವಾದಿಗಳು ಅವರ ವಾರಸುದಾರರಾಗಿ ಸೇರ್ಪಡೆಯಾಗಿದ್ದರು ಎಂದರೆ ಸರಿ. ಸದರಿ ಅರ್ಜಿಯಲ್ಲಿ ನ್ಯಾಯಾಲಯದ ನಿಯೋಗಿಯವರು ವರದಿ ಮತ್ತು ನಕ್ಷೆಯನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ಅರ್ಜಿಯಲ್ಲಿ ನಿಪಿ-1 ರಂತೆ ಆದೇಶವಾಗಿರುತ್ತದೆ ಎಂದರೆ ಸರಿ. ಸದರಿ ಅರ್ಜಿಯಲ್ಲಿ ಮಲಿಯನಾಯಕರವರ ಎಲ್ಲಾ ವಾರಸುದಾರರು ಪಕ್ಷಗಾರರಾಗಿರುತ್ತಾರೆ ಎಂದರೆ ಸರಿ. ಆ ಅರ್ಜಿಯಲ್ಲಿ ವಕೀಲರಾಗಿ ನಾನೇ ಪ್ರತಿನಿಧಿಸಿ ಪ್ರಕರಣ ನಡೆಯಿಸಿರುತ್ತೇನೆ ಎಂದರೆ ಸರಿ. ನಿಪಿ-1 ರ ಆದೇಶದಂತೆ ದಾವಾ ಸ್ವತ್ತುಗಳು ನನ್ನ ತಾತ ಮಲಿಯನಾಯಕರವರ

ವಾರಸುದಾರರ ಭಾಗಕ್ಕೆ ಬಂದ ಸ್ವತ್ತುಗಳಾಗಿರುತ್ತವೆ ಎಂದರೆ ಸರಿ. ನಿಪಿ-1 ರಂತೆ ನಾವು ಅಂತಿಮ ಡಿಕ್ರಿ ಪಡೆದಿರುತ್ತೇವೆ. ಸದರಿ ಅಂತಿಮ ಡಿಕ್ರಿ ನಮ್ಮ ಬಳಿಯಿರುತ್ತದೆ. ಸಾಕ್ಷಿಯು ಅಂತಿಮ ಡಿಕ್ರಿಯ ಪ್ರತಿಯನ್ನು ನೋಡಿ ಒಪ್ಪಿ ಗುರುತಿಸಿ, ಹಾಜರುಪಡಿಸಿದ್ದರಿಂದ ಅದನ್ನು **ನಿಡಿ-35** ಎಂದು ಗುರುತಿಸಲಾಯಿತು. ನಿಪಿ-1ರ ಆದೇಶದಂತೆ ಜಂಟಿಯಾಗಿ ದಾವಾ ಸ್ವತ್ತುಗಳು ಹಂಚಿಕೆಯಾಗಿದ್ದು, ಪ್ರತ್ಯೇಕವಾಗಿ ಹಂಚಿಕೆಯಾಗಿಲ್ಲ ಎಂದರೆ ಸರಿ. ದಾವಾ ಸ್ವತ್ತುಗಳ ಖಾತೆಯನ್ನು ನಾನು ಮತ್ತು ನನ್ನ ತಂದೆ ಸೇರಿ ಮಾಡಿಸಿರುತ್ತೇವೆ. ನಿಡಿ-35 ರ ಪ್ರಕಾರ ದಾವಾ ಸ್ವತ್ತುಗಳ ಖಾತೆ ನನ್ನ ತಂದೆಯ ಹೆಸರಿಗೆ ಮಾತ್ರ ವರ್ಗಾವಣೆಯಾಗಿರುತ್ತವೆ ಎಂದರೆ ಸರಿ. ನನ್ನ ತಂದೆ ಆರ್ಥಿಕವಾಗಿ ಪ್ರಬಲಾಗಿದ್ದರಿಂದ ನನ್ನ ತಂದೆಯ ಹೆಸರಿಗೆ ಮಾತ್ರ ಖಾತೆ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಡಿ-35 ರ ಪ್ರಕಾರ ದಾವಾ ಸ್ವತ್ತುಗಳ ಖಾತೆ ನಿಪಿ-1 ರ ಆದೇಶದಂತೆ ಎಲ್ಲರ ಹೆಸರನಲ್ಲೂ ಜಂಟಿಯಾಗಿ ಖಾತೆಯಾಗಬೇಕಾಗಿತ್ತು, ಆದರೆ ನನ್ನ ತಂದೆಯ ಹೆಸರಿಗೆ ಮಾತ್ರ ಖಾತೆ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಖಾತೆ ನನ್ನ ತಂದೆಯ ಹೆಸರಿಗೆ ವರ್ಗಾವಣೆಯಾದ ನಂತರ 2 ನೇ ಐಟಂ ದಾವಾ ತಪಶೀಲು ಸ್ವತ್ತನ್ನು 2 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಸ್ವತ್ತಿನಲ್ಲಿ ವಾದಿಗಳಿಗು ಸಹ ಹಕ್ಕಿತ್ತು ಎಂದರೆ ಸರಿಯಲ್ಲ. ವಾದಿಗಳಿಗೆ ಗೊತ್ತಿಲ್ಲದಂತೆ ಅಕ್ರಮವಾಗಿ ನನ್ನ ತಂದೆಯ ಹೆಸರಿಗೆ ಖಾತೆ ಮಾಡಿಸಿಕೊಂಡು ನಾನು ಮತ್ತು ನನ್ನ ತಂದೆ ಸೇರಿ 2 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಡಿ-35 ರಲ್ಲಿ ಉಲ್ಲೇಖವಿರುವ ಚಿಕ್ಕನಾಯಕ ಮತ್ತು ಸಿದ್ದನಾಯಕ ನನ್ನ ತಾತನ ಸಹೋದರರಾಗಿರುತ್ತಾರೆ ಎಂದರೆ ಸರಿ. ನನ್ನ ತಂದೆ ದಾವಾ ಸ್ವತ್ತುಗಳನ್ನು ಮಾರಾಟ ಮಾಡಲು ಪ್ರಯತ್ನಿಸಿದ್ದರಿಂದ ವಾದಿಗಳು ಮೂಲ ದಾವೆ ಸಂಖ್ಯೆ 530/2012 ರಂತೆ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯನ್ನು ಶಾಶ್ವತ

ನಿರ್ಬಂಧಕಾಜ್ಞೆ ಕೋರಿ ಸಲ್ಲಿಸಿದ್ದು, ಆ ದಾವೆ ವಜಾವಾದ ನಂತರ ವಿಭಾಗ ಕೋರಿ ಈ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ನಿಪಿ-1 ರಂತೆ ಆದೇಶವಾದ ನಂತರ ನನ್ನ ಅಜ್ಜಿ ದೊಡ್ಡಮ್ಮ ಮೃತಪಟ್ಟಿರುತ್ತಾರೆ ಎಂದರೆ ಸರಿ. ನಂತರ ಆ ಅರ್ಜಿಯಲ್ಲಿ ಅವರ ವಾರಸುದಾರರು ಮಾತ್ರ ಇರುತ್ತಾರೆ ಎಂದರೆ ಸರಿ. ನನ್ನ ತಂದೆಯ ಹೆಸರಿಗೆ ಆಗಿರುವ ಖಾತೆಯು ವಾದಿಗಳಿಗೆ ಬದ್ಧಪಡಿಸುವುದಿಲ್ಲ ಎಂದರೆ ಸರಿಯಲ್ಲ. ಖಾತೆಯಾಗುವಾಗ ನನ್ನ ಅಜ್ಜಿ ದೊಡ್ಡಮ್ಮ ಬದುಕಿದ್ದರು.

**ಈ ಹಂತದಲ್ಲಿ ವಾದಿಗಳ ಪರ ವಕೀಲರು ಮುಂದಿನ ಪಾಟೀಸವಾಲಿಗಾಗಿ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,**
**ನಂಜನಗೂಡು.**